**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ : 715

ಮಾನ್ಯ ಸದಸ್ಯರ ಹೆಸರು : ಶ್ರೀ ಸಿ.ಎನ್ ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 21.08.2026

ಉತ್ತರಿಸುವ ಸಚಿವರು : ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಟೈಪ್-1 ಮಧುಮೇಹದಿಂದ ಬಳಲುತ್ತಿರುವ 18 ವರ್ಷದೊಳಗಿನ ಮಕ್ಕಳಿಗೆ ಉಚಿತವಾಗಿ ಇನುಲಿನ್ ನೀಡುವುದಾಗಿ ಬಜೆಟ್ ನಲ್ಲಿ ಘೋಷಿಸಿ ನಾಲ್ಕೈದು ತಿಂಗಳು ಕಳೆದರೂ ಯೋಜನೆ ಇನ್ನು ಜಾರಿಗೆ ಬಾರದಿರಲು ಕಾರಣಗಳೇನು; | ರಾಜ್ಯದಲ್ಲಿ ಟೈಪ್-1 ಮಧುಮೇಹದಿಂದ ಬಳಲುತ್ತಿರುವ 18 ವರ್ಷದೊಳಗಿನ ಮಕ್ಕಳಿಗೆ ಉಚಿತವಾಗಿ ಇನ್ಸುಲಿನ್ ಒದಗಿಸುವ ಯೋಜನೆಯನ್ನು ಜಾರಿಗೊಳಿಸುವ ಸಂಬಂಧ ಈಗಾಗಲೇ ಕ್ರಿಯಾ ಯೋಜನೆ ಹಾಗೂ SOP ಸಿದ್ಧಪಡಿಸಲಾಗಿದೆ.<br><br>ಇನ್ಸುಲಿನ್ ಖರೀದಿಗಾಗಿ KSMSCL ನಲ್ಲಿ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. |
| ಆ) | ರಾಜ್ಯ ವೈದ್ಯಕೀಯ ಸರಬರಾಜು ನಿಗಮದ (ಕೆಎಸ್‌ಎಂಎಸ್ ಸಿಎಲ್) ಟೆಂಡರ್ ಪ್ರಕ್ರಿಯೆಯ ವಿಳಂಬದಿಂದಾಗಿ ರಾಜ್ಯದ ಅಂದಾಜು 7 ಸಾವಿರ ಮಕ್ಕಳು ಇನುಲಿನ್‌ಗಾಗಿ ಸ್ವಂತ ಹಣದಿಂದ ಪ್ರತಿ ತಿಂಗಳು ರೂ. 2000/- ದಿಂದ ರೂ.5000/-ದವರೆಗೆ ವೆಚ್ಚ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯ ವೈದ್ಯಕೀಯ ಸರಬರಾಜು ನಿಗಮದ (KSMSCL) ಟೆಂಡರ್ ಪ್ರಕ್ರಿಯೆಯ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಕೆ.ಎಸ್.ಎಂ.ಎಸ್.ಸಿ.ಎಲ್. 2025-26 ನೇ ಸಾಲಿನ ಆರೋಗ್ಯ ಸಂಸ್ಥೆಗಳ ಬೇಡಿಕೆ ಪಟ್ಟಿಯಂತೆ ವಿವಿಧ ಇನ್ಸುಲಿನ್ ಔಷಧಗಳನ್ನು IND-273 ಟೆಂಡರ್ ನೋಟಿಫಿಕೇಷನ್ KSMSCL/DRUGS/TND/25-26AI/PACKAGE-5/ 16 DRUGS/ 29/2025-2ರನ್ವಯ ದಿನಾಂಕ:08/08/2025 ರಂದು ಖರೀದಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.<br><br>ಟೆಂಡರ್ IND-273 Call-1 ರಲ್ಲಿ ಸರಬರಾಜುದಾರರು ಭಾಗವಹಿಸದ / ತಾಂತ್ರಿಕವಾಗಿ ಅನರ್ಹರಾಗಿರುವ ಕಾರಣದಿಂದ ವಿವಿಧ ಇನ್ಸುಲಿನ್ ಔಷಧಗಳ ಟೆಂಡರ್ ಪೂರ್ಣಗೊಂಡಿರುವುದಿಲ್ಲ.<br><br>ತದನಂತರ IND-410 ಟೆಂಡರ್ ನೋಟಿಫಿಕೇಷನ್ KSMSCL/DRUGS/RETND/2025-26AL/INSULIN INJ /18/ 2026-27 ರನ್ವಯ ದಿನಾಂಕ:15/07/2026 ರಂದು ಮರುಟೆಂಡರ್ ಮಾಡಲಾಗಿರುತ್ತದೆ. ಸದರಿ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 21/08/2026 ರಂದು ಇದ್ದು, ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಇನ್ಸುಲಿನ್ ಸರಬರಾಜುಗೊಳಿಸಲು ಕ್ರಮ ಕೈಗೊಳ್ಳಲಾಗುವುದು. |
| ಇ) | ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳ ಮೇಲಿನ ಈ ಆರ್ಥಿಕ ಹೊರೆಯನ್ನು ತಪ್ಪಿಸಲು ಮತ್ತು ಕಿಡ್ವಾಯಿ (KIER) ಹಾಗೂ ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಗಳಲ್ಲಿ ನೋಂದಾಯಿತರಾಗಿರುವ ನೂರಾರು ಮಕ್ಕಳಿಗೆ ಅನುಕೂಲ ಮಾಡಿಕೊಡಲು ಈ ಉಚಿತ ಇನುಲಿನ್ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗುವುದು? | ಕರ್ನಾಟಕ ಎಂಡೋಕ್ರೈನಾಲಜಿ ಸಂಶೋಧನಾ ಸಂಸ್ಥೆ (KIER) ಮತ್ತು ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಗಳಲ್ಲಿ ನೊಂದಾಯಿತರಾಗಿರುವ ಮಕ್ಕಳನ್ನು ಒಳಗೊಂಡಂತೆ ಸುಮಾರು 5000 ಮಕ್ಕಳಿಗೆ ಇನ್ಸುಲಿನ್ ಖರೀದಿಗಾಗಿ KSMSCL ನಲ್ಲಿ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಪ್ರಕ್ರಿಯೆ ಪೂರ್ಣಗೊಂಡ ನಂತರ ಯೋಜನೆಯನ್ನು ಜಾರಿಗೊಳಿಸಲಾಗುವುದು. |

| | | |
|---|---|---|
| | ಯಾವ ಕಾಲಮಿತಿಯೊಳಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯರೂಪಕ್ಕೆ ತರಲಾಗುವುದು? | |

ಸಂಖ್ಯೆ:ಅಕಇ 87 ಎಸ್‌ಟಿಡಿಕ್ಯೂ 2026

(ಯು.ಟಿ ಖಾದರ್ ಫರೀದ್)
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ
ಮತ್ತು ಕುಟುಂಬ ಕಲ್ಯಾಣ ಸಚಿವರು